

ಎಡದಿಂದ ಬಲಕ್ಕೆ:

1. ಸುಂದರಾಕಾರನಿಗೆ ಕಂಡದ್ದು ಅಮೃತ ಮೂಲ ಕಡಲು (4)
2. ಏಣಿಯ ಆಚೆ ನೋಡಿ ಅಳಿಲು (3)
3. ಕಚ್ಚಿ ತಂದದ್ದೇ ಹೌದೆಂಬುದು ನಿಶ್ಚಿತ (3)
6. ಇಂದಿನ ತಿಥಿ ಅಮಾವಾಸ್ಯೆಯಾದರೆ ಮೊನ್ನೆಯದು? (4)
7. ಕಳ್ಳಕಾಕರ ಕೆಲಸ–ಬರೀ ಮಲಿನ (3)
9. ಹಾದಿ ಸುತ್ತುವ ಎಲ್ಲ ವಸ್ತುಗಳಿಗೂ ಬಟ್ಟೆ ಮುಚ್ಚು (3)
11. ದರ ದರ ಎಳೆತಂದಾಗ ಸುರಿಯಿತು ರಕ್ತ (3)
13. ಗುರುತು ತೋರಿಸದಾತ ಸೇರಿದ್ದು ಜೈಲು (3)
15. ಕಚ್ಚಾಡುತ್ತಿದ್ದಾರೆ ನೋಡಿ, ಅಡವಿ ಮನುಷ್ಯರಂತಿದ್ದಾರೆ (4)
17. ಮೂರೆಣಿಸುವುದರಲ್ಲಿ ಬಂದಳು ಸುಂದರಿ (3)
18. ಖರ್ಜೂರ ತಿರುವಲು ಹೊರಟನೇ ಅಗಸ? (3)
19. ಲೋಲಕದ ಬಳಕೆಯೇ ಇಲ್ಲ– ಅದು ಪಾತಾಳ ಪ್ರಪಂಚ (4)

ಮೇಲಿಂದ ಕೆಳಕ್ಕೆ:

1. ರಚಿಸುತ್ತಿರುವಾಗಲೇ ತಿಳಿಯಿತು–ಅದು ಒಳ್ಳೆಯ ಚಿತ್ತಾರ (3)
2. ಪರ್ವತದ ತುದಿಯೇ ತಲೆ ಕೆಳಗು (3)
3. ಇಲ್ಲಿ ಕಳ್ಳನ ಕೈಯಲ್ಲಿ 'ಹಿಡಿದೆತ್ತುವ ಸಾಧನ' (3)
5. ತಗ್ಗದೇ ಇರಬೇಕೆಂದು ಏನಿಂಥ ಒತ್ತಾಯ? (3)
7. ಕರ್ತಾರನ ಕೃಪೆ–ಕೊರಡಿನಲ್ಲೂ ಚಿಗುರು (3)
8. ಇಲ್ಲೇ ಕೂರಲು ಬಂದವ ಇನ್ನೂ ಬಾಲಕ (3)
9. ಹೊರೆಯಾಯಿತು. ಅಷ್ಟೇ ಬಿಟ್ಟರೆ...? (3)
10. ಸರಾಗವೇನಿಲ್ಲ, ನೆಲ ಕೊರೆವ ಮಾರ್ಗ (3)
12. ಅಧ್ಯಾಪಕರ ವಿರುದ್ಧವೂ ಕೂಗು ಕೇಳಿಸಿತೇ? (3)
14. ಕಾರಂಜಿಯ ಬಳಿ ಬೆಂಕಿ ತಾಗಿದರೇ ಉರಿವ ಅಲೋಹ (3)
15. ಕಾಣುವಂತೆ ಮಾಡಲಿಕ್ಕೆ ಧನ ಸಹಾಯ (3)
16. ಕಾರನ್ನೇ ತಿರುವಿ ಯಾತನಾ ಲೋಕ ತಲುಪಿದ (3)

## ಪದಬಂಧ: 14-10-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಂಬರ; 3. ವಿರಾಗ; 4. ಹಿಡಿತ; 6. ದಲಿತ; 7. ಆಪದ್ಧನ; 9. ವನವಾಸ; 11. ಪರಿಪಾಟ; 13. ನವನೀತ; 15. ಹಕೀಮ; 17. ಕರಾರು; 18. ರುಧಿರ; 19. ಕುಹಕ.

ಮೇಲಿಂದ ಕೆಳಕ್ಕೆ:

1. ಅಂಗದ; 2. ರಹಿತ; 3. ವಿರುದ್ಧ; 5. ತಲ್ಲೀನ; 7. ಆಟಾಟೋಪ; 8. ನವನಟ; 9. ವಧಾಸ್ಥಾನ; 10. ಸಹಮತ; 12. ಪಾಲಕ; 14. ವಜೀರ; 15. ಹರುಕು; 16. ಮರುಕ.

# ಸತ್ಯ-ಮಿಥ್ಯೆ

## ಹಂಸಗೀತೆ -ನಿಜವೇ?



'ಹಂಸಗೀತೆ'– ಅದೊಂದು ಜನಜನಿತ ರೂಢಿ ನುಡಿ. ಅಷ್ಟೇ ಅಲ್ಲ, ಅದು ತುಂಬ ಜನಪ್ರಿಯವಾಗಿರುವ ಒಂದು ಕಾವ್ಯಾಲಂಕಾರ ಕೂಡ. ಶತಮಾನಗಳಿಂದ ಜಗದಾದ್ಯಂತ ಕವಿತೆ–ಕಾವ್ಯಗಳಲ್ಲಿ, ನಾಟಕಗಳಲ್ಲಿ, ವಿಚಾರಧಾರೆಗಳಲ್ಲಿ, ದರ್ಶನ ಸಾಹಿತ್ಯದಲ್ಲಿ ಕಡೆಗೆ ಜನಸಾಮಾನ್ಯರ ನಿತ್ಯದ ಮಾತುಗಳಲ್ಲೂ ಧಾರಾಳವಾಗಿ ಬೆರೆತಿರುವ, ಬಳಕೆಯಲ್ಲಿರುವ ಪ್ರತಿಮೆ ಇದು. 'ಹಂಸಗೀತೆ' ಎಂಬ ಹೆಸರಿನದೇ ಪ್ರಸಿದ್ಧ ಗೀತಭರಿತ ಕನ್ನಡ ಚಲನಚಿತ್ರವೂ ಒಂದಿರುವುದು ನಿಮಗೂ ತಿಳಿದಿರಬಹುದು.

ಎಲ್ಲೆಡೆ ಬಳಕೆಯಲ್ಲಿರುವಂತೆ ಹಂಸಗೀತೆ ಎಂಬುದು 'ಅಂತಿಮ ಗಾನ'ಕ್ಕೆ ಅಥವಾ 'ಬದುಕಿನ ಕಟ್ಟಕಡೆಯ ಕೃತಿ'ಗೆ ಸಮಾನಾರ್ಥಕ. "ಹಂಸಗಳು ತಮ್ಮ ಮರಣ ಸನ್ನಿಹಿತವಾದಾಗ ಮನಕಲಕುವಂತೆ ದನಿ ತೆಗೆಯುತ್ತವೆ; ಕೇಳುಗರ ಹೃದಯ ಕರಗುವಂತೆ ಹಾಡುತ್ತ ಪ್ರಾಣ ಬಿಡುತ್ತವೆ" –ಈ ಭಾವವೇ ಈ ರೂಪಕಕ್ಕೆ ಮೂಲ ಆಧಾರ.

ಈ ಭಾವ, ಈ ನಂಬಿಕೆ ನಿಜವೇ? ಮರಣಾಸನ್ನ ಹಂಸಗಳು ಹಾಡುತ್ತ ಅಂತ್ಯ ಕಾಣುವುದು ಸತ್ಯವೇ? ಅಥವಾ ಇದೆಲ್ಲ ಕೇವಲ ಮಿಥ್ಯಾ ಕಲ್ಪನೆಗಳೇ?

ವಾಸ್ತವ ಏನೆಂದರೆ ಹಂಸಗಳಿಗೂ ಹಾಡುಗಾರಿಕೆಗೂ ಸಂಬಂಧವೇ ಇಲ್ಲ. ಹಂಸಗಳು ನೀರಹಕ್ಕಿಗಳು. ಕೊಳ, ಸರೋವರಗಳಂಥ ನಿಂತ ನೀರಿನ ನೆಲೆಗಳಲ್ಲಿ ಅಥವಾ ಮಂದ ಹರಿವಿನ ನದೀ ತಾಣಗಳಲ್ಲಿ ಅವುಗಳ ವಾಸ. 'ಮೂಕ ಹಂಸ, ಕಪ್ಪು ಹಂಸ, ಕಪ್ಪು ಕತ್ತಿನ ಹಂಸ, ವ್ಹಿಸಲಿಂಗ್ ಸ್ವಾನ್ ಇತ್ಯಾದಿ ಒಟ್ಟು ಎಂಟು ಪ್ರಭೇದಗಳ ಹಂಸಗಳಿವೆ. ಉದ್ದ ಶರೀರ, ಉದ್ದನ್ನ ಕತ್ತು ಮತ್ತು ಕುಳ್ಳು ಕಾಲುಗಳು ಎಲ್ಲ ಹಂಸಗಳ ಸಾಮಾನ್ಯ ಲಕ್ಷಣಗಳು.

ಪ್ರಭೇದ ಎಷ್ಟೇ ಇರಲಿ, ಒಂದಂಶ ಸ್ಪಷ್ಟ: ಯಾವುದೇ ಹಂಸಕ್ಕೂ ಹಾಡುವ ಸಾಮರ್ಥ್ಯ ಇಲ್ಲ. ಹಾಡು ಹಕ್ಕಿ ವರ್ಗಕ್ಕೆ ಹಂಸಗಳು ಸೇರಿಲ್ಲ. 'ವ್ಹಿಸಲಿಂಗ್ ಸ್ವಾನ್'ನದು ಸೀಟಿಯಂಥ ಧ್ವನಿ, ಮೂಕ ಹಂಸದ್ದು ಬುಸುಗುಡುವ ಸದ್ದು, ಇನ್ನೆಲ್ಲ ಪ್ರಭೇದಗಳದೂ ಮೆಲ್ಲನ್ನ ಗೊಗ್ಗರು ಶಬ್ದಗಳ ಕರೆ ವಿಧಾನ.

ವಸ್ತುಸ್ಥಿತಿ ಹೀಗಿರುವಾಗ ಹಂಸಗಳು ಹಾಡುವುದು ಹೇಗೆ? ಅದೂ ತನ್ನ ಅಂತ್ಯವನ್ನರಿತು ಧಕ್ಕೆ ತಕ್ಕಂತೆ, ಮನಕರಗಿಸುವಂತೆ ಹಂಸ ಹಾಡುತ್ತದೆಂದರೆ ಅದು ಸಾಧ್ಯ ಹೇಗೆ?

ಆದ್ದರಿಂದಲೇ 'ಹಂಸಗೀತೆ' ಎಂಬುದು ಶುದ್ಧ ಮಿಥ್ಯೆ.

■ ಎನ್. ವಾಸುದೇವ್